ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ಬಿ.ಬಿ.ಎಂ.ಪಿ ವ್ಯಾಪ್ತಿಯ ಖಾಲಿ ನಿವೇಶಗಳಲ್ಲಿ ಮಲೀನ ವಾತಾವರಣ ನಿರ್ಮಾಣ ತಪ್ಪಿಸುವ ಬಗ್ಗೆ

ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

346(474) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಿ.ಬಿ.ಎಂ.ಪಿ ವ್ಯಾಪ್ತಿಯ ಜನವಸತಿ ಪ್ರದೇಶಗಳಲ್ಲಿ ಕೆಲವು ಮಾಲೀಕರು ಖಾಲಿ ನಿವೇಶಗಳನ್ನು ಇಟ್ಟುಕೊಂಡಿದ್ದು, ಅಲ್ಲಿ ಜನರು ಕಸಕಡ್ಡಿಗಳನ್ನು ಹಾಕಿ ಮಲೀನ ವಾತಾವರಣ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

(ಆ) ಖಾಲಿ ನಿವೇಶದಲ್ಲಿ ಸಂಗ್ರಹವಾಗಿರುವ ಕಸಕಡ್ಡಿಗಳು ಮಳೆ ಬಂದಾಗ ನೆನೆದು ಕೊಳೆತು ಅಕ್ಕಪಕ್ಕ ವಾಸ ಮಾಡುತ್ತಿರುವ ಮನೆಗಳ ನಿವಾಸಿಗಳಿಗೆ ದುರ್ವಾಸನೆ ಬರುತ್ತಿರುವುದಲ್ಲದೆ ಖಾಯಿಲೆಗಳಿಗೆ ತುತ್ತಾಗುವ ಅವಕಾಶ ಇರುವುದರಿಂದ ಇದನ್ನು ಸ್ವಚ್ಛಗೊಳಿಸುವಂತೆ ಮಾಲೀಕರಿಗೆ ನೋಟೀಸ್ ನೀಡಲು ಕ್ರಮ ಕೈಗೊಳ್ಳಲಾಗುವುದೇ;

(ಇ) ಕರೋನಾ ಮುಂತಾದ ಕಾಯಿಲೆ ಹರಡುತ್ತಿರುವುದರಿಂದ ಇಂಥ ಮಲೀನ ವಾತಾವರಣ ತಪ್ಪಿಸಿ ಸ್ವಚ್ಛ ವಾತಾವರಣ ಉಂಟು ಮಾಡಲು ಬಿ.ಬಿ.ಎಂ.ಪಿಯ ಆರೋಗ್ಯ ಇಲಾಖೆ ಕೂಡಲೇ ಕ್ರಮ ಕೈಗೊಳ್ಳುವುದೇ ?